ರೋಗಿಗಳಿಗೆ ಅವಶ್ಯಕವಾದ ಎಲ್ಲಾ ಔಷಧಿಗಳು ರೇಟ್ ಕಾಂಟ್ರ್ಯಾಕ್ಟ್‌ನಲ್ಲಿ ಇರುವುದಿಲ್ಲ. ಯಾವ್ಯಾವ ಔಷಧಿಗಳು ರೇಟ್ ಕಾಂಟ್ರಾಕ್ಟ್‌ನಲ್ಲಿರುವುದಿಲ್ಲವೋ ಅಂಥವುಗಳನ್ನು ಸ್ಥಳೀಯವಾಗಿ ಆಸ್ಪತ್ರೆಯ ಮುಖ್ಯಾಧಿಕಾರಿಗಳು ಕೊಂಡುಕೊಳ್ಳುತ್ತಾರೆ. ಅವರು ಡಿಪ್ಟ್ರಿಕ್ಟ್ ಸರ್ಜನ್ ಇರಬಹುದು, ಡಿಪ್ಟ್ರಿಕ್ಟ್ ಹೆಲ್ತ್ ಆಫೀಸರ್ ಇರಬಹುದು ಅಥವಾ ಸ್ಥಳೀಯವಾಗಿ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಆಗಿರಬಹುದು. ಅವರು ಖರೀದಿ ಮಾಡುವ ಕಾಲಕ್ಕೆ ಸಂಬಂಧಪಟ್ಟ ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರನ್ನು ಕರೆದು, ಪ್ರೊಫೆಸರ್‌ಗಳನ್ನು ಕರೆದು ಒಂದು ಮೀಟಿಂಗ್ ಮಾಡಿ ಯಾವ ಯಾವ ಡಿಪಾರ್ಟ್‌ಮೆಂಟ್‌ಗೆ ಯಾವ ಯಾವ ಔಷಧಿಗಳು ಬೇಕು ಎಂಬುದನ್ನು ಸಮಿತಿಯಲ್ಲಿ ನೋಡಿ ಪ್ರತಿಯೊಂದು ಔಷಧಿಗಳಿಗೂ ಕೂಡ ಆರ್.ಸಿ. ಫರ್ಮ್ಸ್ ಕೊಡಬೇಕಾಗಿದ್ದರೆ ಅಂಥವರಿಂದಲೇ ಖರೀದಿ ಮಾಡುತ್ತಾರೆ. ಒಂದು ವೇಳೆ ಅದು ಇಲ್ಲದಿದ್ದ ಪಕ್ಷದಲ್ಲಿ ಕೊಟೇಶನ್ ಕರೆದು ಯಾರು ಕಡಿಮೆ ದರವನ್ನು ಕೋಟ್ ಮಾಡಿರುತ್ತಾರೆ ಅಂಥವರಿಂದ ಔಷಧಿಗಳನ್ನು ಕೊಂಡುಕೊಳ್ಳುತ್ತಾರೆ. ಇನ್ನು ಕಮಿಟಿಯಲ್ಲಿ ಯಾರು ಇರುತ್ತಾರೆ ಎಂಬ ಬಗ್ಗೆ ಹೇಳಬೇಕೆಂದರೆ ಸೂಪರಿಂಟೆಂಡೆಂಟ್, ಆರ್.ಎಂ.ಓ., ಮತ್ತು ಸಂಬಂಧಪಟ್ಟ ಹೆಡ್ಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಇರುತ್ತಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು: ಯಾವ ಯಾವ ಔಷಧಿಗಳನ್ನು ಎಷ್ಟೆಷ್ಟು ವಾಪಸ್ ಮಾಡಿದ್ದೀರಾ ಎಂಬ ಬಗ್ಗೆ ಹೇಳಿ.

ಡಾ: ಎ.ಬಿ. ಮಾಲಕರೆಡ್ಡಿ: ಅದರ ಬಗ್ಗೆ ತಕ್ಷಣದಲ್ಲಿ ನನ್ನ ಹತ್ತಿರ ಉತ್ತರದ ವಿವರಗಳು ಇಲ್ಲ. ಮುಂದೆ ಒದಗಿಸಿಕೊಡುತ್ತೇನೆ.

ಚಿಂತಾಮಣಿ ಸರ್ಕಾರಿ ಆಸ್ಪತ್ರೆ ಕುರಿತು.

೧೬೧(೧೬೮೩)

ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿಯಲ್ಲಿ ೧೫೦ ಹಾಸಿಗೆಗಳ ಆಸ್ಪತ್ರೆಯನ್ನು ಸರ್ಕಾರವು ಮಂಜೂರು ಮಾಡಿದೆಯೇ?

ಆ) ಹಾಸಿಗೆಗಳ ಸಂಖ್ಯೆಯನ್ನು ೧೫೦ ರಿಂದ ೧೦೦ಕ್ಕೆ ಇಳಿಸಲು ಕಾರಣ ನೀಡುವುದು?

ಡಾ: ಎ.ಬಿ.ಮಾಲಕರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ ಆಕುಕ ೨೯ ಆಯೋಕ ೯೪. ದಿನಾಂಕ ೨೯-೩-೧೯೯೪ರಲ್ಲಿ ಮಂಜೂರಾಗಿರುವ ಈ ಆಸ್ಪತ್ರೆ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ಕೈಗೆತ್ತಿಕೊಂಡಿದ್ದು ಮೊದಲನೆ ಮಹಡಿಯವರೆಗೆ ಕಾಮಗಾರಿಯನ್ನು ಭಾಗಶ: ಮಾಡಿ ಅನುದಾನದ ಕೊರತೆಯಿಂದ ಮುಂದಿನ ಕೆಲಸವನ್ನು ನಿಲ್ಲಿಸಲಾಯಿತು.

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಚಿಂತಾಮಣಿ ಆಸ್ಪತ್ರೆಯನ್ನು ೭೪ ಹಾಸಿಗೆಗಳಿಂದ ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿ ಮಾಡಲು ಮಾತ್ರ ಅವಕಾಶವಿದ್ದು ಅಪೂರ್ಣಗೊಂಡಿರುವ ಕಟ್ಟಡ ಒಳಗೊಂಡಂತ ನೆಲ ಮತ್ತು ಮೊದಲ ಮಹಡಿಗಳನ್ನು ಪೂರ್ಣಗೊಳಿಸಿ ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸಲು ಸ್ಪರ್ಧಾತ್ಮಕ ಗುತ್ತಿಗೆ ಕರೆದು ರೂ.೧೬೦.೨೭ ಲಕ್ಷಗಳಿಗೆ ಗುತ್ತಿಗೆಗೆ ನೀಡಲಾಗಿದೆ. ಕಾಮಗಾರಿಯು ೧೭-೧-೨೦೦೦ದಂದು ಪ್ರಾರಂಭವಾಗಿದ್ದು ಗುತ್ತಿಗೆ ಕರಾರಿನನ್ವಯ ೧೬-೭-೨೦೦೧ರಲ್ಲಿ ಪೂರ್ಣಗೊಳ್ಳಬೇಕಾಗಿದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ೧೯೯೪ರಲ್ಲಿ ಬಿ.ಎಸ್.ಪಾಟೀಲ್ (ಸಾಸನೂರ್)ರವರು ಬಹಳ ದಕ್ಷ ಮಂತ್ರಿಗಳಾಗಿ ಎಲ್ಲಾ ಕಡೆಗಳಲ್ಲಿಯೂ ಚಾಕಚಕ್ಯತೆಯಿಂದ ಓಡಾಡಿ ಕೆಲಸಗಳನ್ನು ಮಾಡುತ್ತಿದ್ದರು. ಆಗ ಡಿಸ್ಟ್ರಿಕ್ಟನ ಮಧ್ಯ ಭಾಗದಲ್ಲಿರುವ ಚಿಂತಾಮಣಿಯಲ್ಲಿ ಹೆಚ್ಚು ಬಡವರು ಇದ್ದಾರೆಂದು ಮತ್ತು ಆಂಧ್ರದ ಬಡವರು ಕೂಡ ಹೆಚ್ಚಾಗಿ ಇಲ್ಲಿ ಇದ್ದಾರೆಂದು ಚಿಕಿತ್ಸೆಗಾಗಿ ಬರುತ್ತಾರೆ ಹಾಸಿಗೆಗಳು ಕಡಿಮೆ ಇರುವುದರಿಂದ ಬೇರೆ ಊರುಗಳಿಗೆ ಮತ್ತು ಬೆಂಗಳೂರಿನ ಆಸ್ಪತ್ರೆಗಳಿಗೆ ಹೋಗಬೇಕಾದ ಪರಿಸ್ಥಿತಿ ಇರುವುದರಿಂದ ೧೫೦ ಹಾಸಿಗೆಗಳ ಆಸ್ಪತ್ರೆ ಬೇಕೇ ಬೇಕೆಂದು ನಾನು ಅವರಿಗೆ ಹೇಳಿದ್ದೆ. ಆಗ ಅವರು ಚಿಂತಾಮಣಿಗೆ ಬಂದು ಇನ್ಸ್‌ಪೆಕ್ಷನ್ ಮಾಡಿದ್ದಲ್ಲದೇ ಸರಿಯಾದ ರೀತಿಯಲ್ಲಿ ಅಗತ್ಯ ಮಾಹಿತಿಗಳನ್ನು ತರಿಸಿಕೊಂಡು, ಫೈನಾನ್ಶಿಯಲ್ ಅಪ್ರೂವಲ್‌ನ್ನು ಕೂಡ ತೆಗೆದುಕೊಂಡು ಕ್ಯಾಬಿನೆಟ್ ಮುಂದೆ ಇಟ್ಟು ೧೫೦ ಬೆಡ್‌ಗಳ ಆಸ್ಪತ್ರೆಗೆ ಸ್ಯಾಂಕ್ಷನ್ ಮಾಡಿಸಿದರು. ಆದರೆ ಈಗ ೧೦೦ ಬೆಡ್‌ಗಳ ಆಸ್ಪತ್ರೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದಕ್ಕೆ ಏನು ಕಾರಣ ಎನ್ನುವುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸಚಿವರು ತಿಳಿಸಬೇಕು.

ಡಾ: ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ೧೯೯೪ರಲ್ಲಿ ಈ ಆಸ್ಪತ್ರೆಗೆ

ಮಂಜೂರಾತಿ ಸಿಕ್ಕಿದ್ದು ನಿಜ. ಆದರೆ, ನಂತರದ ಬೆಳವಣಿಗೆಯಲ್ಲಿ ಕಾಂಗ್ರೆಸ್ ಸರ್ಕಾರ ಹೋಗಿ ಜನತಾದಳ ಸರ್ಕಾರ ಅಸ್ತಿತ್ವಕ್ಕೆ ಬಂತು. ಅವರು ಯಾವ ಕಾರಣಕ್ಕಾಗಿ ಆಸ್ಪತ್ರೆಯ ಮಂಜೂರಾತಿಯನ್ನು ಸ್ಥಗಿತಗೊಳಿಸಿದರೋ ಅದು ನನಗೆ ಗೊತ್ತಿಲ್ಲದಿರುವುದರಿಂದ ಕಾರಣವನ್ನು ನನ್ನನ್ನು ಕೇಳಿದರೆ ನಾನು ಹೇಗೆ ಹೇಳಲಿ? ಅಧಿಕಾರಿಗಳು ಏನು ಹೇಳಿದ್ದಾರೆಂದರೆ ಇದಕ್ಕೆ ಬೇಕಾದ ಸಾಕಷ್ಟು ಹಣವನ್ನು ಒದಗಿಸಿಕೊಡಲಿಲ್ಲವಾದ್ದರಿಂದ ನಾವು ೧೫೦ ಬೆಡ್‌ಗಳ ಆಸ್ಪತ್ರೆಯನ್ನು ಕಟ್ಟುವುದಕ್ಕಾಗಲಿಲ್ಲವೆಂದಿದ್ದಾರೆ. ಆದರೆ ಮುಂದೆ ಕರ್ನಾಟಕ ಹೆಲ್ತ್ ಸಿಸ್ಟಂ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಬಂದ ಮೇಲೆ ಒಂದು ನಾರ್ಮ್ ಹಾಕಿಕೊಂಡು ಎಲ್ಲಾ ತಾಲ್ಲೂಕುಗಳಲ್ಲಿಯೂ ೧೦೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಯನ್ನು ಒದಗಿಸಿಕೊಡಬೇಕೆಂದು ಹೇಳಲಾಯಿತು. ಅದರಡಿಯಲ್ಲಿ ಚಿಂತಾಮಣಿಯಲ್ಲಿಯೂ ಕೂಡ ೧೦೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆ ಕಟ್ಟಡಕ್ಕೆ ನಾವು ಎಲ್ಲಾ ರೀತಿಯಲ್ಲಿಯೂ ಸಜ್ಜುಗೊಳಿಸಿದ್ದೇವೆ. ಇದಕ್ಕೆ ಟೆಂಡರ್ ಕೂಡ ಆಗಿದೆ ಈ ವರ್ಷದ ಜುಲೈ ತಿಂಗಳಲ್ಲಿ ಆ ಕಾರ್ಯ ಪೂರ್ತಿಗೊಳ್ಳುತ್ತದೆ.

ಶ್ರೀ ಚೌಡರೆಡ್ಡಿ: ಅಧ್ಯಕ್ಷರೆ, ಈಗ ಕೊಡುತ್ತಿರುವ ಉತ್ತರ ಸರಿಯಿಲ್ಲ. ೧೫೦ ಬೆಡ್‌ಗಳ ಆಸ್ಪತ್ರೆಗೆ ಸರ್ಕಾರದ ಮಂಜೂರು ದೊರಕಿದೆಯೆಂದು ಉತ್ತರದಲ್ಲಿಯೇ ಹೇಳಿದ್ದಾರೆ. ಆದರೆ ವಿಶ್ವಬ್ಯಾಂಕ್‌ನಿಂದ ಹಣದ ಅಲಾಟ್‌ಮೆಂಟ್ ಮಾಡುವ ಸಂದರ್ಭದಲ್ಲಿ ೧೦೦ ಬೆಡ್‌ಗಳ ಆಸ್ಪತ್ರೆ ಎಂದು ಮಾಡಿದ್ದಾರೆ. ತಾಲ್ಲೂಕಿನಲ್ಲಿ ೧೦೦ ಬೆಡ್‌ಗಳ ಆಸ್ಪತ್ರೆಯೇ ಇರಬೇಕೆಂದೂ ಇಲ್ಲ. ಚಿಂತಾಮಣಿಯಲ್ಲಿ ಹೆಚ್ಚು ಬಡವರು ಇದ್ದು ೧೫೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಗೆ ಬೇಡಿಕೆ ಹೆಚ್ಚು ಇದೆ. ಅಲ್ಲಿ ಬಡವರುಗಳೇ ಹೆಚ್ಚಿರುವುದರಿಂದ ೨೦೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಯನ್ನೇ ಹಾಕಬೇಕಾದ ಅಗತ್ಯವಿದೆಯೆಂದು ಆರೋಗ್ಯ ಇಲಾಖೆಯವರೇ ಹೇಳುತ್ತಾರೆ. ಈಗ ೧೦೦ ಬೆಡ್‌ಗಳ ಆಸ್ಪತ್ರೆ ಕಟ್ಟಡಕ್ಕೆ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಈ ಕಟ್ಟಡದಲ್ಲಿಯೇ ಇನ್ನು ಒಂದು ಫ್ಲೋರ್ ಮೇಲೆ ಕಟ್ಟಿದ್ದರೆ ೫೦ ಬೆಡ್‌ಗಳ ಸಾಮರ್ಥ್ಯವನ್ನು ಹೆಚ್ಚು ಮಾಡಬಹುದು. ಆದುದರಿಂದ ೧೫೦ ಬೆಡ್‌ಗಳ ಆಸ್ಪತ್ರೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರಕ್ಕೆ ತೊಡಕು ಇರುತ್ತದೆ. ಒಂದೊಂದು ತಾಲ್ಲೂಕಿಗೆ ಬೇರೆ ಬೇರೆ ಸಂಖ್ಯೆಗಳುಳ್ಳ ಬೆಡ್‌ಗಳ ಆಸ್ಪತ್ರೆ ಕಟ್ಟಲು ತೊಂದರೆಯಾಗುತ್ತದೆ. ಹಿಂದೆ ಯಾವ ಕಾರಣಕ್ಕಾಗಿ ೧೫೦ ಬೆಡ್‌ಗಳ ಆಸ್ಪತ್ರೆಗೆ ಮಂಜೂರಾತಿ ಕೊಟ್ಟಿದ್ದಾರೋ ಅದು ಬೇರೆ ವಿಚಾರ. ಹಿಂದೆ ಕೊಟ್ಟುಬಿಟ್ಟಿದ್ದರೂ ಮುಂದಿನ ಸರ್ಕಾರದ ಐದು ವರ್ಷದ ಅವಧಿಯಲ್ಲಿ ಕೆಲಸ ಪೂರ್ಣವಾಗಿ ಸ್ಥಗಿತಗೊಂಡಿತ್ತು. ಕೇವಲ ೭೪ ಬೆಡ್‌ಗಳು ಮಾತ್ರ ಆ ಆಸ್ಪತ್ರೆಯಲ್ಲಿತ್ತು. ಆದರೆ

ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ೧೦೦ ಬೆಡ್‌ಗಳ ಸಾಮರ್ಥ್ಯವನ್ನು ಮಾಡಿ ಮೇಲ್ದರ್ಜೆಗೇರಿಸಲು ಒಂದು ಕೋಟಿ ೬೦ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿ ಈಗ ಕಟ್ಟಡ ಮುಕ್ತಾಯದ ಹಂತದಲ್ಲಿದೆ. ಮೊದಲು ೧೦೦ ಬೆಡ್‌ಗಳ ಆಸ್ಪತ್ರೆಯಾಗಲಿ. ಮುಂದೆ ಅಲ್ಲಿ ಇನ್ನೂ ೫೦ ಬೆಡ್‌ಗಳ ಕಟ್ಟಡ ಅವಶ್ಯಕವಾಗಿ ಬೇಕೆಂದು ಸರ್ಕಾರ ಮನಗಂಡರೆ ಆಗ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಸಿ.ಬೈರೇಗೌಡ: ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ೧೫೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಗೆ ಮಂಜೂರಾತಿಯನ್ನು ೧೦೦ ಬೆಡ್‌ಗಳಿಗೆ ಸರ್ಕಾರ ಇಳಿಸಿದ ಕಾರಣ ಗೊತ್ತಿಲ್ಲವೆಂದು ಹೇಳಿದರು. ಮಂತ್ರಿಗಳೆ, ಆಕಸ್ಮಾತ್ ಪುರೋಹಿತರು ಅಮಾವಾಸ್ಯೆ ಬರುವುದನ್ನು ಮರೆತುಬಿಟ್ಟರೆ ಅಮಾವಾಸ್ಯೆ ಬರುವುದು ನಿಂತುಹೋಗುತ್ತದೆಯೇ? ಯಾವ ಕಾರಣಕ್ಕೋಸ್ಕರ ೧೫೦ ಬೆಡ್‌ಗಳಿಂದ ೧೦೦ ಬೆಡ್‌ಗಳ ಆಸ್ಪತ್ರೆಗೆ ಇಳಿಸಲಾಯಿತು ಎಂಬ ಬಗ್ಗೆ ಕಡತದಲ್ಲಿ ದಾಖಲಾಗಿರುತ್ತದೆ. ಆ ಅಧಿಕೃತ ಉತ್ತರವನ್ನು ನೋಡಿ ಉತ್ತರವನ್ನು ಕೊಡುವುದನ್ನು ಬಿಟ್ಟು ಸರ್ಕಾರ ಬದಲಾವಣೆಯಾದ ತಕ್ಷಣ ೧೦೦ ಬೆಡ್‌ಗಳಿಗೆ ಇಳಿಸಲಾಗಿದೆಯೆಂದು ತಪ್ಪುದಾರಿಗೆ ಎಳೆಯುವ ರೀತಿಯಲ್ಲಿ ಉತ್ತರ ಕೊಡುವುದು ಸೂಕ್ತವಲ್ಲ. ನಿಮ್ಮ ಕಡತದಲ್ಲಿ ಏನು ದಾಖಲಾಗಿದೆ ಎಂಬ ಬಗೆ ದಯವಿಟ್ಟು ಹೇಳಬೇಕು. ಇನ್ನು ಎರಡನೆಯದಾಗಿ ಕಟ್ಟಡವನ್ನು ದಿನಾಂಕ ೧೬-೭-೨೦೦೧ಕ್ಕೆ ಪೂರ್ಣಗೊಳಿಸಬೇಕಾಗಿದೆಯೆಂದು ಹೇಳಿದ್ದೀರಿ. ಈಗಾಗಲೇ ಅವಧಿ ಮುಗಿಯುತ್ತಾ ಬರುತ್ತಿರುವುದರಿಂದ ಇಲ್ಲಿಯವರೆಗೆ ಫಿಸಿಕಲಿ ಯಾವ ಹಂತದಲ್ಲಿ ಕೆಲಸ ನಡೆಯುತ್ತಿದೆ ಮತ್ತು ಯಾವಾಗ ಆಸ್ಪತ್ರೆ ಕಟ್ಟಡವನ್ನು ಮುಗಿಸುತ್ತೀರಿ ಎಂಬ ಬಗ್ಗೆ ದಯವಿಟ್ಟು ಹೇಳಬೇಕು.

ಡಾ: ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಫೈಲ್‌ನಲ್ಲಿ ಯಾವ ಕಾರಣಕ್ಕಾಗಿ ೧೦೦ ಬೆಡ್‌ಗಳ ಆಸ್ಪತ್ರೆಗೆ ಇಳಿಸಲಾಯಿತು ಎಂಬ ಬಗ್ಗೆ ಕಾರಣವಿಲ್ಲ. ಆದರೆ ಇಷ್ಟು ಮಾತ್ರ ನಿಜ. ಹಣ ಬಿಡುಗಡೆ ಮಾಡಲಿಲ್ಲವಾದ ಕಾರಣ ಕೆಲಸ ಹಾಗೆಯೇ ಸ್ಥಗಿತಗೊಂಡಿತು. ಇನ್ನು ಇದು ಈ ವರ್ಷದ ಜುಲೈ ತಿಂಗಳಲ್ಲಿ ಕಟ್ಟಡದ ಕೆಲಸ ಮುಗಿಯುತ್ತದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಾನು ಯಾರನ್ನೂ ದೂರುತ್ತಿಲ್ಲ. ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಅದರ ಬಗ್ಗೆ ವಿಶೇಷವಾಗಿ ನಾನು ಹೇಳುವುದಿಲ್ಲ. ನನ್ನ ದುರ್ದೈವ, ಬೈರೇಗೌಡರು ಹಿಂದೆ ಸ್ವಲ್ಪವಾದರೂ ಗಮನ ನಮ್ಮ ಕಡೆಗೆ ಹರಿಸಲಿಲ್ಲ. ನನ್ನ ಕಾಲದಲ್ಲಿ ಮಂಜೂರಾದ ಏಳೆಂಟು ಕಾಮಗಾರಿಗಳಿಗೆ ಇದೇ ಗತಿಯಾಗಿದೆ. ಅಲ್ಲಿ ಶೈತ್ಯಾಗಾರಗಳ ಬಗ್ಗೆ ಕೂಡ ಅವರು ಗಮನ ಹರಿಸಲಿಲ್ಲ. ಒಂದು ಕೋಟಿ ರೂಪಾಯಿಗಳ ಕಟ್ಟಡ ಇವೊತ್ತಿಗೂ ಹಾಗೆಯೇ ಬಿದ್ದಿದೆ. ನನ್ನ ಕಾಲದಲ್ಲಿ ಸ್ಯಾಂಕ್ಷನ್ ಮಾಡಿಸಿದ ಎಲ್ಲ ಕೆಲಸಗಳೂ ನಿಂತು ಹೋಗಿವೆ. ಇದು ನನ್ನ

ದುರ್ದೈವ್ಯವಾಗಿದೆ. ಈಗ ೧೫೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಯನ್ನಾದರೂ ದಯವಿಟ್ಟು ಅಧ್ಯಕ್ಷರು ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಹುಣಸೂರು ಪಟ್ಟಣದಲ್ಲಿ ವಿಜ್ಞಾನ ಮಹಾವಿದ್ಯಾಲಯ ಪ್ರಾರಂಭಿಸುವುದು.

೧೬೨(೧೬೧೬)

ಶ್ರೀ ವಿ.ಪಾಪಣ್ಣ(ಹುಣಸೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಹುಣಸೂರು ಪಟ್ಟಣದಲ್ಲಿ ಶ್ರೀ ಡಿ.ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನದ ವಿಷಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

೨. ಹಾಗಿದ್ದಲ್ಲಿ ವಿಜ್ಞಾನ ವಿಷಯವನ್ನು ಮಂಜೂರಾತಿ ಮಾಡದೇ ಇರುವುದು ಕಟ್ಟಡ ಇಲ್ಲದೇ ಇರುವುದಕ್ಕೆ ಕಾರಣಗಳೇನು?

೩. ಪ್ರಥಮ ದರ್ಜೆ ಕಾಲೇಜು ಕಟ್ಟಡದ ಕಾಮಗಾರಿ ಕೆಲಸ ಮಂದಗತಿಯಲ್ಲಿ ನಡೆಯುತ್ತಿದ್ದು ಹಲವು ವರ್ಷಗಳಿಂದ ಕೆಲಸ ನಡೆಯುತ್ತಿದ್ದರೂ ಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

೪. ಹಾಗಿದ್ದಲ್ಲಿ ಪೂರ್ಣಗೊಳ್ಳಲು ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಡಾ: ಜಿ.ಪರಮೇಶ್ವರ್: (ಉನ್ನತ ಶಿಕ್ಷಣ ಸಚಿವರು):

೧. ಹೌದು.

೨. ವಿಜ್ಞಾನ ಕೋರ್ಸ್‌ನ್ನು ತೆರೆಯಲು ಅಗತ್ಯವಾದ ಮೂಲಭೂತ ಸೌಕರ್ಯ ಮತ್ತು ಅಧ್ಯಾಪಕರ ಕೊರತೆಯಿಂದ ಮಂಜೂರಾಯಿ ನೀಡಿರುವುದಿಲ್ಲ. ಪ್ರಸ್ತುತ ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

೩. ಹೌದು.

೪. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣವನ್ನು ಹಾಗೂ ಈಗಾಗಲೇ ಕಟ್ಟಡ ನಿರ್ಮಾಣ ಪ್ರಾರಂಭಗೊಂಡಿರುವ ಕಾಲೇಜುಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹುಡ್ಕೊ ಸಂಸ್ಥೆಯಿಂದ ರೂ.೧೮೭೧.೦೦